# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 935
2. ಮಾನ್ಯ ಸದಸ್ಯರ ಹೆಸರು : ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 27.12.2022
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ಮೈಶುಗರ್ ಕಾರ್ಖಾನೆಗೆ ಸರ್ಕಾರ 2022-23ರ ಆಯವ್ಯಯದಲ್ಲಿ ಘೋಷಿಸಿದ್ದ 50 ಕೋಟಿ ಅನುದಾನದಲ್ಲಿ ಬಿಡುಗಡೆಯಾದ ಅನುದಾನವೆಷ್ಟು; ಬಿಡುಗಡೆಯಾದ ಅನುದಾನವನ್ನು ಯಾವ ಯಾವ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿದೆ; (ವಿವರಗಳನ್ನು ನೀಡುವುದು) | ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಈ ಕಂಪನಿಗೆ 2022-23ನೇ ಸಾಲಿನಲ್ಲಿ ಒಟ್ಟು ರೂ.32.58 ಕೋಟಿಗಳ ಅನುದಾನವನ್ನು ಹಾಗೂ ರೂ.15.00 ಕೋಟಿಗಳ ಸಾಲವನ್ನು (Bridge Loan) ರಾಜ್ಯ ಸರ್ಕಾರದಿಂದ ಬಿಡುಗಡೆಗೊಳಿಸಲಾಗಿರುತ್ತದೆ. ಸದರಿ ಅನುದಾನ ಮತ್ತು ಸಾಲದ ಮೊತ್ತವನ್ನು ಉಪಯೋಗಿಸಿರುವ ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ. |
| (ಆ) | ಮಂಡ್ಯದ ಮೈಶುಗರ್ ಕಾರ್ಖಾನೆಗೆ ಸರ್ಕಾರ 2022-23ರ ಆಯ-ವ್ಯಯದಲ್ಲಿ ಘೋಷಿಸಿದ್ದ 50 ಕೋಟಿ ಅನುದಾನದಲ್ಲಿ ಬಿಡುಗಡೆಯಾಗದೆ ಬಾಕಿ ಉಳಿದಿರುವ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಕಾರ್ಖಾನೆಯ ಯಂತ್ರೋಪಕರಣಗಳ ದುರಸ್ತಿಗಾಗಿ ರೂ.50.00 ಕೋಟಿಗಳನ್ನು ಒದಗಿಸುವುದಾಗಿ 2022-23ನೇ ಸಾಲಿನ ಆಯವ್ಯಯ ಖಂಡಿಕೆ:271ರಲ್ಲಿ ಘೋಷಿಸಲಾಗಿರುತ್ತದೆ. 2022-23ನೇ ಸಾಲಿನಲ್ಲಿ ಇದುವರೆವಿಗೂ ರೂ.32.58 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದ್ದು, ಆಯವ್ಯಯ ಘೋಷಣೆಯಂತೆ ರೂ.17.42 ಕೋಟಿಗಳನ್ನು ಬಿಡುಗಡೆಗೊಳಿಸುವುದು ಬಾಕಿ ಇರುತ್ತದೆ. |

| | | |
|---|---|---|
| (ಇ) | ಸದರಿ ಕಾರ್ಖಾನೆಗೆ ದುಡಿಯುವ ಬಂಡವಾಳವನ್ನು ಸರ್ಕಾರ ನೀಡಿದೆಯೇ; ಹಾಗಿಲ್ಲದಿದ್ದಲ್ಲಿ, ದುಡಿಯುವ ಬಂಡವಾಳವನ್ನು ನೀಡಲು ಸರ್ಕಾರ ಕ್ರಮ ವಹಿಸುವುದೇ; | ದಿ ಮೈಸೂರು ಷುಗರ್ ಕಂಪನಿ ಲಿ, ಮಂಡ್ಯ - ಈ ಕಂಪನಿಯ ಆಸ್ತಿಗಳ ಮೇಲೆ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆದು ಅಗತ್ಯವಾದ ದುಡಿಯುವ ಬಂಡವಾಳವನ್ನು ಕ್ರೋಢೀಕರಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಸಿಐ 79 ಸಿಓಎಫ್ 2022, ದಿನಾಂಕ:07.09.2022ರಲ್ಲಿ ತಿಳಿಸಲಾಗಿರುತ್ತದೆ. ಅದರಂತೆ ದಿನಾಂಕ:30-09-2022ರಂದು ಇ-ಟೆಂಡರ್ ಮತ್ತು ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗಿರುತ್ತದೆ. ಆದರೆ ಯಾವುದೇ ಬ್ಯಾಂಕ್ /ಹಣಕಾಸು ಸಂಸ್ಥೆಗಳಿಂದ ಟೆಂಡರ್ ಸ್ವೀಕೃತವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದಿಂದ bridge loan ಆಗಿ ರೂ.15.00 ಕೋಟಿಗಳನ್ನು ದುಡಿಯುವ ಬಂಡವಾಳವಾಗಿ ಬಿಡುಗಡೆಗೊಳಿಸಿದೆ. |
| | | ಕರ್ನಾಟಕ ರಾಜ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಮೈಷುಗರ್ ಕಾರ್ಖಾನೆಗೆ ರೂ.15.00 ಕೋಟಿಗಳನ್ನು ಬಿಡುಗಡೆ ಆದೇಶಿಸಿದ್ದು, ಮೈಸೂರು ಸಕ್ಕರೆ ಕಂಪನಿಯ ಆಸ್ತಿಗಳ ಮೇಲೆ ಬ್ಯಾಂಕು / ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ನಂತರ ಸದರಿ ರೂ.15.00 ಕೋಟಿಗಳ ಸಾಲವನ್ನು ಕರ್ನಾಟಕ ರಾಜ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿ ನಿಗಮ ( ಕೆ.ಎಸ್.ಎಸ್ .ಐ.ಡಿ.ಸಿ)ಕ್ಕೆ ಬಡ್ಡಿ ರಹಿತವಾಗಿ ಮಾರ್ಚ್ 2023ರ ಒಳಗೆ ಮರು ಪಾವತಿಸಬೇಕಾಗಿರುತ್ತದೆ.<br><br>ದಿನಾಂಕ:30-09-2022ರಂದು ಪ್ರಕಟಿಸಲಾದ ಇ-ಟೆಂಡರ್‌ಗೆ ಯಾವುದೇ ಬ್ಯಾಂಕ್ /ಹಣಕಾಸು ಸಂಸ್ಥೆಗಳು ಭಾಗವಹಿಸದ ಹಿನ್ನೆಲೆಯಲ್ಲಿ ದಿ ಮೈಸೂರು ಷುಗರ್ ಕಂಪನಿ ಲಿ, ಮಂಡ್ಯ - ಈ ಕಂಪನಿಗೆ ದುಡಿಯುವ ಬಂಡವಾಳವಾಗಿ ಪ್ರಸ್ತುತ ಸಾಲಿನಲ್ಲಿ ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ರೂ.50.00 ಕೋಟಿಗಳ ಸಾಲವನ್ನು ಪಡೆಯಲು |

| | | |
|---|---|---|
| | | ರಾಜ್ಯ ಸರ್ಕಾರದ ಖಾತರಿಯನ್ನು ಒದಗಿಸುವ ಕುರಿತ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಸಹಮತಿಗಾಗಿ ಸಲ್ಲಿಸಲಾಗಿರುತ್ತದೆ. ಪ್ರಸ್ತುತ ಸದರಿ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |
| (ಈ) | ಕಾರ್ಖಾನೆಯ ನಿರ್ವಹಣೆಗಾಗಿ ಹೆಚ್ಚುವರಿಯಾಗಿ ಅಗತ್ಯವಿರುವ ಅನುದಾನವನ್ನು ಬಿಡುಗಡೆಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿಯೇ ಹೆಚ್ಚುವರಿ ಅನುದಾನವನ್ನು ಈ ಕಾರ್ಖಾನೆಗೆ ಬಿಡುಗಡೆ ಮಾಡಲಾಗವುದು? (ವಿವರಗಳನ್ನು ನೀಡುವುದು) | ದಿ ಮೈಸೂರು ಷುಗರ್ ಕಂಪನಿಯಲ್ಲಿ ಯಂತ್ರೋಪಕರಣಗಳ ದುರಸ್ತಿ, ಅಗತ್ಯವಿರುವ ಉಪಕರಣ / ಯಂತ್ರೋಪಕರಣಗಳ ಖರೀದಿ ಮತ್ತು ಅವಶ್ಯಕ ಕಾಮಗಾರಿಗಳನ್ನು ಕೈಗೊಳ್ಳಲು ಅಗತ್ಯವಿರುವ ರೂ.23.25 ಕೋಟಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಸಹಮತಿಗಾಗಿ ಸಲ್ಲಿಸಲಾಗಿದೆ. |

ಸಂಖ್ಯೆ: ಸಿಐ 262 ಸಿಓಎಫ್ 2022

(ಶಂಕರ.ಬಿ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

ಮೈಸೂರು ಸಕ್ಕರೆ ಕಂಪನಿ ನಿ., ಮಂಡ್ಯ.

ವಿಷಯ : ಶ್ರೀ ದಿನೇಶ್ ಗೂಳೀಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ವಿಧಾನ ಪರಿಷತ್ ಸದಸ್ಯರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ :780 (935)ಕ್ಕೆ ಉತ್ತರ.

ಅನುಬಂಧ

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವಿವರ | ಬಿಡುಗಡೆಯಾದ ಹಣದ ವಿವರ | ಬಳಕೆಯಾದ ಹಣದ ವಿವರ |
|---|---|---|---|
| 01. | ಕಬ್ಬು ಕಟಾವು ಮೇಸ್ತ್ರಿಗಳಿಗೆ ಮುಂಗಡ ಹಣ | 235.00 | 128.25 |
| 02. | ನೌಕರರ ಸ್ವಯಂ ನಿವೃತ್ತಿ ಸೌಲಭ್ಯ ಪಾವತಿಸಲು | 225.00 | 77.35 |
| 03. | ಕಾರ್ಖಾನೆಯ ಯಂತ್ರೋಪಕರಣಗಳ ದುರಸ್ಥಿ ಹಾಗೂ ಓವರ್ ಹಾಲಿಂಗ್ ಕೆಲಸಗಳಿಗೆ | 375.00 | 0 |
| 04. | ಕಾರ್ಖಾನೆಯ ಯಂತ್ರೋಪಕರಣಗಳ ದುರಸ್ಥಿ ಹಾಗೂ ಓವರ್ ಹಾಲಿಂಗ್ ಕೆಲಸಗಳಿಗೆ | 1125.00 | 0 |
| 05. | ಕಾರ್ಖಾನೆಯಲ್ಲಿ ಕಬ್ಬು ನುರಿಸಲು ಅಗತ್ಯವಿರುವ ಕೆಲಸಗಳನ್ನು ಕೈಗೊಳ್ಳುವ ಸಲುವಾಗಿ | 1040.00 | 0 |
| 06. | ದುಡಿಯುವ ಬಂಡವಾಳ | 258.00 | 0 |
| 07. | Bridge loan ಸಾಲ | 1500.00 | 0 |
| | ಮೆ.ಆರ್.ಬಿ.ಟೆಕ್ನಾಲಜಿ (ಸಕ್ಕರೆ ಘಟಕದ ದುರಸ್ಥಿ ಕಾರ್ಯ) | | 1255.64 |
| | ಮೆ.ಆರ್.ಬಿ.ಟೆಕ್ನಾಲಜಿ (ಓ & ಎಂ) | | 619.89 |
| | ಮೆ: ಎಸ್ಸೆನಾರ್ ಪವಾರ್ ಟೆಕ್ (ಸಹ-ವಿದ್ಯುತ್ ಘಟಕದ ದುರಸ್ತಿ ಕಾರ್ಯ) | | 247.80 |
| | ರೈತರಿಗೆ ಪಾವತಿಸಿರುವ ಕಬ್ಬು ಕಟಾವು ಮುಂಗಡ ಹಣ, ಸಾಗಾಣಿಕೆ ವೆಚ್ಚ ಮತ್ತು ಅಂತಿಮ ಬಟಾವಡೆ | | 1378.63 |
| | ವಿದ್ಯುತ್ ಶುಲ್ಕ, | | 63.28 |
| | ಜಾಹಿರಾತಿ ವೆಚ್ಚ | | 8.12 |
| | ವಿಮೆ | | 31.34 |
| | ಸಾಮಾಗ್ರಿ ಖರೀದಿ , ಸ್ವಚ್ಛತಾ ಮತ್ತು ಕಾಮಗಾರಿಯ ವೆಚ್ಚ (ಮೆ: ISGEC ಸಂಸ್ಥೆ) | | 353.04 |
| | ಕಾರ್ಮಿಕರ ವೇತನ, ಭದ್ರುತಾ ಸಿಬ್ಬಂದಿ ಮತ್ತು ಕಿಯೋನಿಕ್ಸ್ | | 221.91 |
| | ಕಬ್ಬಿನ ಸಿಪ್ಪೆಯ ವೆಚ್ಚ ಮತ್ತು ಸಾಗಾಣಿಕೆ ವೆಚ್ಚ | | 168.91 |
| | ಇತರೆ ವೆಚ್ಚ | | 70.61 |
| | | 4758.00 | 4624.77 |

ಟಿಪ್ಪಣಿ : ಉಳಿಕೆ ರೂ.133.23 ಲಕ್ಷಗಳು ಕಬ್ಬು ಕಟಾವಿನ ಮುಂಗಡ ಹಣ ಮತ್ತು ಸ್ವಯಂ ನಿವೃತ್ತಿ ನೌಕರರಿಗೆ ಪಾವತಿಸಬೇಕಾಗಿರುತ್ತದೆ.

ವ್ಯವಸ್ಥಾಪಕರು(ಹ & ಲೆ) (ಪ್ರ)

Scanned with CamScanner